MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 12-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಅಕ್ಟೋಬರ್ ತಿಂಗಳ ಮಲೇಶಿಯನ್ ಪಾಮೆಣ್ಣೆ ದಾಸ್ತಾನು 3 ವರ್ಷಗಳ ಗರಿಷ್ಠ ಮಟ್ಟಕ್ಕೆ

2022 ಅಕ್ಟೋಬರ್ ತಿಂಗಳ ಮಲೇಶಿಯನ್ ಪಾಮೆಣ್ಣೆ ದಾಸ್ತಾನು 3.74 ಶೇಕಡಾ ಹೆಚ್ಚಳವಾಗಿ 2.4 ಮಿಲಿಯನ್ ಟನ್‌ಗಳಿಗೇರಿ 2019 ಸೆಪ್ಟೆಂಬರ್ ನಂತರದ ಗರಿಷ್ಠ ಮಟ್ಟ ತಲುಪಿದೆಯೆಂದು ಮಲೇಶಿಯನ್ ಪಾಮೆಣ್ಣೆ ಮಂಡಳಿ ಪ್ರಕಟ ಪಡಿಸಿದೆ. ರಾಯಿಟರ್ಸ್ ಸರ್ವೆ ಅಂದಾಜಿಗಿಂತ ಸ್ವಲ್ಪ ಕಡಿಮೆ(2.53 ಮಿಲಿಯನ್ ಟನ್) ಯಾಗಿದೆ. ಉತ್ಪಾದನೆ ಸೆಪ್ಟೆಂಬರ್ ತಿಂಗಳಿಗಿಂತ 2.44 ಶೇಕಡಾ ಹೆಚ್ಚಳವಾಗಿ ಅಕ್ಟೋಬರ್ ತಿಂಗಳಲ್ಲಿ 1.81 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ. ರಫ್ತು 5.66 ಶೇಕಡಾ ಹೆಚ್ಚಳದೊಂದಿಗೆ 1.5 ಮಿಲಿಯನ್ ಟನ್ ತಲುಪಿದೆಯೆನ್ನಲಾಗಿದೆ. ನವೆಂಬರ್ 1–10 ರವರೆಗೆ ಮಲೇಶಿಯದಿಂದ ಪಾಮೆಣ್ಣೆ ರಫ್ತು 12.7 ಶೇಕಡಾ ಹೆಚ್ಚಳದೊಂದಿಗೆ 420477 ಟನ್‌ಗಳಿಗೇರಿದೆಯೆನ್ನಲಾಗಿದೆ. ಇಂಡೋನೇಶಿಯಾದ 9 ಕಂಪೆನಿಗಳು 2.4 ಬಿಲಿಯನ್ ಡಾಲರ್ ಮೌಲ್ಯದ 2.5 ಮಿಲಿಯನ್ ಟನ್ ಪಾಮೆಣ್ಣೆಯನ್ನು ಚೈನಾದ 13 ಖರೀದಿದಾರರಿಗೆ ಮಾರಾಟ ಮಾಡಲು ( ರಫ್ತು) ಕರಾರು ಮಾಡಿಕೊಂಡಿವೆಯೆನ್ನಲಾಗಿದೆ.

## ಬಟಾಟೆ ದರ ದಿಢೀರ್ ಕುಸಿತ

ವ್ಯಾಪಾರಿಗಳು ತಮ್ಮಲ್ಲಿದ್ದ ದಾಸ್ತಾನು ಮಾರುಕಟ್ಟೆಗೆ ಬಿಡಲಾರಂಭಿಸಿರುವುದರಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ದರ ಹೆಚ್ಚಳದ ನಿರೀಕ್ಷೆಯಿಂದ ಕೆಲಕಾಲ ತಮ್ಮಲ್ಲಿದ್ದ ಹೆಚ್ಚುವರಿ ದಾಸ್ತಾನು ಬಟಾಟೆಯನ್ನು ವ್ಯಾಪಾರಿಗಳು ಮಾರುಕಟ್ಟೆಗೆ ಬಿಡಲಾರಂಬಿಸಿದ್ದು, ದರ ಇಳಿಕೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ದರ ಇಳಿಕೆಯ ಸಾಧ್ಯತೆ ಯಿದೆಯೆನ್ನಲಾಗಿದೆ.

## ಸಾಸಿವೆ ದರ ಇಳಿಕೆ

ಸಾಸಿವೆ ಎಣ್ಣೆ ತಯಾರಕರಿಂದ ಬೇಡಿಕೆ ಇಳಿಕೆಯಿಂದ ಜೈಪುರ ಮಾರುಕಟ್ಟೆಯಲ್ಲಿ ಸಾಸಿವೆ ದರ ಇಳೀಕೆಯಾಗಿದೆಯೆನ್ನಲಾಗಿದೆ.

## ಜಾಗತಿಕ ಸಾಸಿವೆ ಎಣ್ಣೆ ಉತ್ಪಾದನೆ

ಜಾಗತಿಕ ಸಾಸಿವೆ ಎಣ್ಣೆ ಉತ್ಪಾದನೆ 2021–22 ರ 29.07 ಮಿಲಿಯನ್ ಟನ್‌ಗಳಿಂದ 2022–23 ರಲ್ಲಿ 31.73 ಮಿಲಿಯನ್ ಟನ್ ಗಳಿಗೇರಲಿದೆಯೆನ್ನಲಾಗಿದೆ. ಭಾರತದ ಉತ್ಪಾದನೆ ಹಿಂದಿನ ವರ್ಷದ 3.74 ಮಿಲಿಯನ್ ಟನ್‌ಗಳಿಂದ ಈ ವರ್ಷ 3.80 ಮಿಲಿಯನ್ ಟನ್, ಕೆನಡಾ 3.57 ಟನ್‌ಗಳಿಂದ 4.43 ಮಿಲಿಯನ್ ಟನ್ ಹಾಗೂ ಯುರೋಪಿಯನ್ ಯುನಿಯನ್ 9.15 ಮಿಲಿಯನ್ ಟನ್‌ಗಳಿಂದ ಈ ವರ್ಷ 9.91 ಮಿಲಿಯನ್ ಟನ್‌ಗಳಿಗೆ ಹೆಚ್ಚಳವಾಗಲಿದೆಯೆನ್ನಲಾಗಿದೆ.

## ಜಾಗತಿಕ ಪಾಮೆಣ್ಣೆ ಉತ್ಪಾದನ

USDA ಅಂದಾಜಿನಂತೆ ಜಾಗತಿಕ ಪಾಮೆಣ್ಣೆ ಉತ್ಪಾದನೆ 2021–22 ರಲ್ಲಿದ್ದ 75.93 ಮಿಲಿಯನ್ ಟನ್‌ಗಳಿಂದ 2022–23 ರಲ್ಲಿ 78.22 ಮಿಲಿಯನ ಟನ್ ಗಳಿಗೇರಲಿದೆಯೆನ್ನಲಾಗಿದೆ. ಇಂಡೋನೇಶೀಯಾದ ಉತ್ಪಾದನೆ 66.5 ಮಿಲಿಯನ್ ಟನ್‌ಗಳು ಹಾಗೂ ಮಲೇಶಿಯದ ಉತ್ಪಾದನೆ 18.8 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ.

## ಸೋಯಾಬೀನ್ ಎಣ್ಣೆ

ಜಾಗತಿಕ ಸೋಯಾಬೀನ್ ಉತ್ಪಾದನೆ 2022–23 ರಲ್ಲಿ 39.53 ಮಿಲಿಯನ್ ಟನ್‌ಗಳಾಗಲಿದ್ದು 2021–22 ರಲ್ಲಿ ಇದು 355.59 ಮಿಲಿಯನ್ ಟನ್‌ಗಳಾಗಿತ್ತೆನ್ನಲಾಗಿದೆ. ಬ್ರೆಜಿಲ್‌ನ ಉತ್ಪಾದನೆ ಹಿಂದಿನ ವರ್ಷದ 127 ಮಿಲಿಯನ್ ಟನ್‌ಗಳಿಂದ 152 ಮಿಲಿಯನ್ ಟನ್, ಅರ್ಜೆಂಟಿನಾದ ಉತ್ಪಾದನೆ 43.9 ಮಿಲಿಯನ್ ಟನ್‌ಗಳಿಂದ ಈ ವರ್ಷ 49.5 ಮಿಲಿಯನ್ ಟನ್ ಹೆಚ್ಚಳ ಹಾಗೂ ಯು.ಎಸ್ ಉತ್ಪಾದನೆ 121.52 ಮಿಲಿಯನ್ ಟನ್‌ಗಳಿಂದ 118.26 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಲಿದೆಯೆನ್ನಲಾಗಿದೆ. ಜಾಗತಿಕ ಸೋಯಾಬೀನ್ ಎಣ್ಣೆ ಉತ್ಪಾದನೆ 2021–22 ರಲ್ಲಿದ್ದ 59.32 ಮಿಲಿಯನ್ ಟನ್‌ಗಳಿಂದ 2022–23 ರಲ್ಲಿ 61.87 ಮಿಲಿಯನ್ ಟನ್‌ಗಳಿಗೇರಲಿದೆಯೆನ್ನಲಾಗಿದೆ.